**ದಿನಾಂಕಃ 17.04.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**<u>ಪಾಟೀ ಸವಾಲುಃ ಪ್ರತಿವಾದಿಗಳ ಪರ ವಕೀಲರಿಂದಃ</u>**

ನನ್ನ ಅನುಭವ ಹಾಗೂ ಸರ್ವೆ ದಾಖಲೆಗಳ ಪ್ರಕಾರ ಸ್ವತ್ತಿನ ಕಾನೆಶುಮಾರಿ ಸಂಖ್ಯೆಗಳು ಕಂದಾಯ ಜಮೀನುಗಳಿಗೆ ಸಂಬಂಧಿಸಿದ ದಾಖಲಾತಿಗಳಲ್ಲಿ ನಮೂದು ಇರುವುದಿಲ್ಲ. ಕಾನೆಶುಮಾರಿ ಸಂಖ್ಯೆ ಹಾಗೂ ಅಸೆಸ್‌ಮೆಂಟ್ ಸಂಖ್ಯೆ ನೀಡಲು ಸ್ವತ್ತುಗಳು ಗ್ರಾಮ ಠಾಣಾ ವ್ಯಾಪ್ತಿಯ ಒಳಗೆ ಇರಬೇಕು ಎಂದರೆ ಸರಿ. ನನಗೆ ವಾದಿಯು ಕಾನೆಶುಮಾರಿ ಸಂ.728, ಅಸೆಸ್‌ಮೆಂಟ್ ಸಂ.48, ಖಾತಾ ಸಂ.163 ರ ಸ್ವತ್ತು ಸರ್ವೆ ನಂಬರ್ ಸ್ವತ್ತಿನಲ್ಲಿ ಬರುತ್ತದೆ ಎಂಬ ಬಗ್ಗೆ ಯಾವುದೇ ದಾಖಲಾತಿಯನ್ನು ಕಮಿಷನ್ ಸಮಯದಲ್ಲಿ ಹಾಜರುಪಡಿಸಿರುವುದಿಲ್ಲ. ಆ ರೀತಿಯ ದಾಖಲಾತಿಗಳನ್ನು ನಾನು ನ್ಯಾಯಾಲಯದಿಂದ ನನಗೆ ಕಳುಹಿಸಿದ ದಾಖಲಾತಿಗಳಲ್ಲಿಯೂ ಸಹಾ ನೋಡಿರುವುದಿಲ್ಲ. ಸರ್ವೆ ನಂ.48 ರಲ್ಲಿ ಕಾನೆಶುಮಾರಿ ಸಂ.728, ಅಸೆಸ್‌ಮೆಂಟ್ ಸಂ.48, ಖಾತಾ ಸಂ.163 ರ ಸ್ವತ್ತು ಬರುತ್ತದೆ ಎಂಬ ಬಗ್ಗೆ ನಮ್ಮ ಕಛೇರಿಯಲ್ಲಿ ಯಾವುದೇ ದಾಖಲಾತಿಗಳು ಲಭ್ಯವಿಲ್ಲ. ನಿಪಿ-1 ಮತ್ತು 14 ರ ದಾಖಲಾತಿಗಳನ್ನು ನನಗೆ ಸರ್ವೆ ಕಾರ್ಯದ ಸಮಯದಲ್ಲಿ ಒದಗಿಸಿದ್ದರು ಎಂದರೆ ಸರಿ. ನಿಪಿ-14 ರಲ್ಲಿ ಕಾನೆಶುಮಾರಿ ಸಂ.728, ಅಸೆಸ್‌ಮೆಂಟ್ ಸಂ.48, ಖಾತಾ ಸಂ.163 ರ ಸ್ವತ್ತು ಸರ್ವೆ ನಂ.48 ರಲ್ಲಿ ಬರುತ್ತದೆ ಎಂಬ ಬಗ್ಗೆ ನಮೂದು ಇಲ್ಲ. ನಾನು ನನ್ನ ವರದಿಯಲ್ಲಿ ಕಾನೆಶುಮಾರಿ ಸಂ.728, ಅಸೆಸ್‌ಮೆಂಟ್ ಸಂ.48, ಖಾತಾ ಸಂ.163 ರ ಸ್ವತ್ತು ಸರ್ವೆ ನಂ.48 ರಲ್ಲಿ ಬರುತ್ತದೆ ಎಂದು ನಿಪಿ-16 ರ ಆಧಾರದಲ್ಲಿ ವಾದಿಯ ಸೂಚನೆಯ

ಮೇರೆಗೆ ಗುರುತಿಸಿರುತ್ತೇನೆ. ನಿಪಿ-16 ರಲ್ಲಿ ತೋರಿಸಿರುವಂತೆ ಹಾಗೂ ನಾನು ನನ್ನ ವರದಿಯಲ್ಲಿ ತೋರಿಸಿರುವಂತೆ ಕಾನೆಶುಮಾರಿ ಸಂ.728, ಅಸೆಸ್‌ಮೆಂಟ್ ಸಂ.48, ಖಾತಾ ಸಂ.163 ರ ಸ್ವತ್ತು ಸರ್ವೆ ನಂ.48 ರಲ್ಲಿ ಬರುತ್ತದೆ ಎಂದು ತೋರಿಸುವ ಯಾವುದೇ ನಕ್ಷೆಗಳು ತಹಸೀಲ್ದಾರ್ ರ ಕಛೇರಿಯಲ್ಲಿ ನಿರ್ವಹಿಸಿರುವ ಕಂದಾಯ ದಾಖಲೆಗಳಲ್ಲಾಗಲೀ ಹಾಗೂ ನಮ್ಮ ಕಛೇರಿಯಲ್ಲಿ ನಿರ್ವಹಿಸಿರುವ ಸರ್ವೆ ದಾಖಲೆಗಳಲ್ಲಾಗಲೀ ಕಂಡು ಬರುವುದಿಲ್ಲ. ನಿಪಿ-16 ರ ದಾಖಲೆಯು ಯಾವುದೇ ಪ್ರಾಧಿಕಾರದಿಂದ ಅನುಮೋದಿತ ಆಗಿರುವ ನಕ್ಷೆ ಅಲ್ಲ ಎಂದರೆ ಸರಿ. ಕಾನೆಶುಮಾರಿ ಹಾಗೂ ಅಸೆಸ್‌ಮೆಂಟ್ ಸಂಖ್ಯೆಗಳು ಸರ್ವೆ ಸಂಖ್ಯೆಯಲ್ಲಿ ಬಾರದೇ ಇರುವುದರಿಂದ ಕಾನೆಶುಮಾರಿ ಸಂ.728, ಅಸೆಸ್‌ಮೆಂಟ್ ಸಂ.48, ಖಾತಾ ಸಂ.163 ರ ಸ್ವತ್ತುಗಳು ಸರ್ವೆ ನಂ.48 ರ ಸ್ವತ್ತಿನಲ್ಲಿ ನಾನು ತೋರಿಸಿರುವ ನಕ್ಷೆ ಹಾಗೂ ನಿಪಿ-16 ರಲ್ಲಿನ ನಕ್ಷೆಯಲ್ಲಿ ತೋರಿಸಿರುವಂತೆ ಬರಲು ಸಾಧ್ಯವಿಲ್ಲ ಎಂದರೆ ಸರಿ. ನಾನು ವಾದಿಯ ಹೇಳಿಕೆಯ ಮೇರೆಗೆ ಕಾನೆಶುಮಾರಿ ಸಂ.728, ಅಸೆಸ್‌ಮೆಂಟ್ ಸಂ.48, ಖಾತಾ ಸಂ.163 ರ ಸ್ವತ್ತು ಸರ್ವೆ ನಂ.48 ರಲ್ಲಿ ಬರುತ್ತದೆ ಎಂದು ತೋರಿಸಿದ್ದೇನೆ ಎಂದರೆ ಸಾಕ್ಷಿ ನುಡಿಯುತ್ತಾರೆ ನಾನು ನಿಪಿ-16 ರ ಆಧಾರದಲ್ಲಿ ತೋರಿಸಿರುತ್ತೇನೆ. ನನ್ನ ವರದಿಯೊಂದಗಿನ ಲಗತ್ತು ನಕ್ಷೆಯಲ್ಲಿ ತೋರಿಸಿರುವ ಸ್ವತ್ತುಗಳನ್ನು ಯಾವುದೇ ದಾಖಲಾತಿಯನ್ನು ಅಧರಿಸಿ ತೋರಿಸಿಲ್ಲ ಎಂದರೆ ಸಾಕ್ಷಿ ನುಡಿಯುತ್ತಾರೆ ನಿಪಿ-16 ನ್ನು ಆಧರಿಸಿ ತೋರಿಸಿರುತ್ತೇನೆ.

2 ನೇ ಪ್ರತಿವಾದಿಗೆ ಸಂಬಂಧಿಸಿದ ದಾಖಲಾತಿಗಳನ್ನು ನಾನು ನೋಡಿದ್ದೇನೆ ಎಂದರೆ ಸರಿ. 2 ನೇ ಪ್ರತಿವಾದಿಯು ಸರ್ವೆ ನಂ.48 ರಲ್ಲಿ 6 ವರೆ ಗುಂಟೆ ಸ್ವತ್ತನ್ನು

ಖರೀದಿಸಿದ್ದು ಅದಕ್ಕೆ ಸರ್ವೆ ನಂ.48/2 ಎಂದು ಪೋಡಿ ಆಗಿದೆ ಎಂದರೆ ಸರಿ. ಸದರಿ ಸ್ವತ್ತಿಗೆ 2 ನೇ ಪ್ರತಿವಾದಿಯು ಭೂ ಪರಿವರ್ತನೆ ಮಾಡಿಸಿಕೊಂಡು ಹದ್ದುಬಸ್ತು ಮಾಡಿಕೊಂಡಿರುತ್ತಾರೆ ಎಂದರೆ ಸರಿ. ನಾನು ಕಮಿಷನ್ ಸಮಯದಲ್ಲಿ ಹದ್ದುಬಸ್ತು ನಕ್ಷೆಯನ್ನು ನೋಡಿರುತ್ತೇನೆ ಎಂದರೆ ಸಾಕ್ಷಿ ನುಡಿಯುತ್ತಾರೆ ಪೋಡಿ ನಕ್ಷೆಯನ್ನು ನೋಡಿರುತ್ತೇನೆ. 6 ವರೆ ಗುಂಟೆ ಸ್ವತ್ತಿನ ಪೈಕಿ 2 ಗುಂಟೆ ಸ್ವತ್ತು ಮೆಟ್ರೋ ಕಾಮಗಾರಿ ಭೂ ಸ್ವಾಧೀನವಾಗಿ ಉಳಿಕೆ 4 ವರೆ ಗುಂಟೆ ಸ್ವತ್ತಿನಲ್ಲಿ ಪ್ರತಿವಾದಿಯು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ. ನನಗೆ ಹಾಜರುಪಡಿಸಿದ್ದ ದಾಖಲೆಗಳ ಪ್ರಕಾರ 2 ನೇ ಪ್ರತಿವಾದಿಯು ಸದರಿ ಭೂ ಸ್ವಾಧೀನವಾದ ಸ್ವತ್ತಿಗೆ ಪರಿಹಾರದ ಹಣವನ್ನು ಸಹಾ ಪಡೆದುಕೊಂಡಿದ್ದಾರೆ ಎಂದರೆ ಸರಿ. ನಿಸಿ-3 ರಲ್ಲಿ 2 ನೇ ಪ್ರತಿವಾದಿಯಿಂದ ಭೂ ಸ್ವಾಧೀನವಾದ ಸ್ವತ್ತನ್ನು ತೋರಿಸಿರುತ್ತಾರೆ ಎಂದರೆ ಸರಿ. ನಿಸಿ-3 ರಲ್ಲಿ ವಾದಿಗಳು ಸರ್ವೆ ನಂ.48 ರಲ್ಲಿ ಸ್ವಾಧೀನದಲ್ಲಿರುವುದನ್ನು ತೋರಿಸಿಲ್ಲ ಎಂದರೆ ಸರಿ. ನಿಪಿ-1 ಮತ್ತು ನಿಪಿ-14 ರಲ್ಲಿ ನಮೂದಿಸಿರುವ ವಿಸ್ತೀರ್ಣ ಹಾಗೂ ಚೆಕ್ಕುಬಂದಿಯ ಮಧ್ಯೆ ವ್ಯತ್ಯಾಸಗಳು ಇವೆ ಎಂದರೆ ಸರಿ. ಸದರಿ ವ್ಯತ್ಯಾಸಗಳನ್ನು ಸರಿಪಡಿಸಿರುವ ಬಗ್ಗೆ ಯಾವುದೇ ದಾಖಲಾತಿಗಳನ್ನು ನನಗೆ ಅಳತೆಯ ಸಮಯದಲ್ಲಿ ನೀಡಿಲ್ಲ ಎಂದರೆ ಸರಿ. ಕಾನೆಶುಮಾರಿ ಸಂ.728, ಅಸೆಸ್‌ಮೆಂಟ್ ಸಂ.48, ಖಾತಾ ಸಂ.163 ರ ಸ್ವತ್ತು 2 ನೇ ಪ್ರತಿವಾದಿಯ ಸರ್ವೆ ನಂ.48/2 ರ 6 ವರೆ ಗುಂಟೆ ಸ್ವತ್ತಿನಲ್ಲಿ ಬರುವುದಿಲ್ಲ ಎಂದರೆ ಸಾಕ್ಷಿ ನುಡಿಯುತ್ತಾರೆ ಆ ರೀತಿ ಬರುತ್ತದೆ ಎಂದು ತೋರಿಸಲು ಯಾವುದೇ ದಾಖಲಾತಿಗಳು ಇಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ಮೆಟ್ರೋಗೆ ಭೂ ಸ್ವಾಧೀನವಾಗಿರುವ ಜಮೀನು ಕೇವಲ 1 ಮುಕ್ಕಾಲು ಗುಂಟೆ ಮಾತ್ರ, ಉಳಿಕೆ

ಜಮೀನು 4 ಮುಕ್ಕಾಲು ಗುಂಟೆ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಗಿದೆ )

ಓ.ಹೇ.ಕೇ. ಸರಿ.ಇದೆ.

**(ವೇದ ಮೂರ್ತಿ ಬಿ.ಎಸ್)**
(ಪ್ರಭಾರ) 5 ನೇ ಅಪರ ನಗರ ಸಿವಿಲ್ ಮತ್ತು
ಸತ್ರ ನ್ಯಾಯಾಧೀಶರು, ಬೆಂಗಳೂರು.